**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಸ್ಪೆಷಲ್ ಕೇಸ್: 54/2019**

ಫ್ರಾಸಾ- 11
ಚಾಸಾ- 18

| | | |
|---|---|---|
| ಸಾಕ್ಷಿದಾರರ ಹೆಸರು | : | ಹೇಮಲತಾ ಜಿ.ಆರ್. |
| ಗಂಡನ ಹೆಸರು | : | ನಂದೀಶ್ ಕುಮಾರ್ ಜಿ.ಆರ್ |
| ವಯಸ್ಸು | : | 40 ವರ್ಷ |
| ವೃತ್ತಿ | : | ಪಿಡಿಓ, ಶಿರಂಗಾಲ ಗ್ರಾಮ ಪಂಚಾಯ್ತಿ |
| ವಾಸ | : | ಕುಶಾಲನಗರ. |

ಸಾಕ್ಷಿಯನ್ನು ದಿನಾಂಕ **12-03-2024** ರಂದು ಕರೆಯಿಸಿ ಪ್ರಮಾಣ ವಚನ **ಭೋಧಿಸಲಾಯಿತು.**

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ:

ನಾನು ಸೆಪ್ಟೆಂಬರ್ -2019 ರಿಂದ ಫೆಬ್ರವರಿ-2020 ರವರೆಗೆ ಪಿಡಿಓ ಆಗಿ ಚೌಡ್ಲು ಗ್ರಾಮ ಪಂಚಾಯ್ತಿಯಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕ 22-10-2019 ರಂದು ಸೋಮವಾರಪೇಟೆ ಪೊಲೀಸ್ ಠಾಣೆಯಿಂದ ಗಣಪತಿ ತಂದೆ ಮೊಣ್ಣಯ್ಯ ರವರ ಮನೆ ಚೌಡ್ಲು ಗ್ರಾಮದಲ್ಲಿ ಇರುವ ಬಗ್ಗೆ ಪರಿಶೀಲಿಸಿ ವರದಿ ಕೋರಿದ್ದು, ನಾನು ಚೌಡ್ಲು ಗ್ರಾಮದ ಕಾನ್ವೆಂಟ್ ಬಾಣೆಯಲ್ಲಿ ಸ್ಥಳ ಪರಿಶೀಲಿಸಿ ಗಣಪತಿ ರವರ ವಾಸಿಸುತಿದ್ದ ಮನೆ ಅವರ ತಾಯಿ ಪಾರ್ವತಿ ರವರ ಹೆಸರಿನಲ್ಲಿ ಕ್ರಮಸಂಖ್ಯೆ4/131 ರಲ್ಲಿ ದಾಖಲಾಗಿರುತ್ತದೆ ಎಂದು ದೃಢೀಕರಣ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ವರದಿ ನಾನು ನೀಡಿದ ವರದಿ ಆಗಿದ್ದು, ಅದನ್ನು ನಿಪಿ-15 ಎಂದು ಅದರಲ್ಲಿ ಇದ್ದ ಸಾಕ್ಷಿ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು- ಆರೋಪಿ ಪರವಾಗಿ ಶ್ರೀ. ಎ.ಜಿ.ಜಿ., ವಕೀಲರಿಂದ:**

ನಿಪಿ-15 ರಲ್ಲಿ ನಾನು ಸದರಿ ಜಾಗದ ಸರ್ವೆ ನಂಬರ್ ಬರೆದಿಲ್ಲ. ನಾನು ನಿಪಿ-15 ನೀಡುವ ಮೊದಲು ಪಾರ್ವತಿ ರವರನ್ನು ವಿಚಾರಿಸಿದ್ದೇನೆ ಅವರಿಂದ ಹೇಳಿಕೆಯನ್ನು ಬರವಣಿಗೆಯಲ್ಲಿ ಪಡೆದುಕೊಂಡಿಲ್ಲ. ಪುಸ್ತಕದ ಕ್ರಮಸಂಖ್ಯೆ 4/131 ಮನೆ ನಂಬರ್

ಆಗಿರುತ್ತದೆ. ನಿಪಿ-15 ರಲ್ಲಿ ಮನೆ ನಂಬರ್ ಹಾಗೂ ಕ್ರಮ ಸಂಖ್ಯೆ ಒಂದೇ ಎಂದು ಬರೆಯಲು ತೊಂದರೆ ಇತ್ತಾ ಎಂದರೆ ಸಾಮಾನ್ಯವಾಗಿ ಕ್ರಮ ಸಂಖ್ಯೆ ಹಾಗೂ ಮನೆ ನಂಬರ್ ಒಂದೇ ಆಗಿರುವುದರಿಂದ ಅದನ್ನು ಪ್ರತ್ಯೇಕವಾಗಿ ಬರೆದಿಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಯ ಚೆಕ್ಕುಬಂದಿಯನ್ನು ನಿಪಿ-15 ರಲ್ಲಿ ಬರೆದಿಲ್ಲ. ಒಂದು ಮನೆಯನ್ನು ಗುರುತಿಸಬೇಕಾದರೆ ಸರ್ವೆ ನಂಬರ್ ಹಾಗೂ ಚೆಕ್ಕು ಬಂದಿ ಬೇಕಾಗುತ್ತದೆ ಎಂದರೆ ಸಾಕ್ಷಿ ಸರ್ವೆ ನಂಬರ್ ನ್ನು ಕಂದಾಯ ಇಲಾಖೆಯವರು ಕೊಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆ ಚೌಡ್ಲು ಗ್ರಾಮದ ಯಾವ ವಾರ್ಡಿನಲ್ಲಿ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ಆ ಸಂದರ್ಭದಲ್ಲಿ ದೇವಿಪ್ರಸಾದ್ ಎಂಬುವವರು ಗ್ರಾಮ ಪಂಚಾಯ್ತಿಯ ಸದಸ್ಯರು ಆಗಿದ್ದರು ಎಂರದೆ ಸರಿ. ಆ ಸಂದರ್ಭದಲ್ಲಿ ಆರೋಪಿ ಗ್ರಾಮ ಪಂಚಾಯ್ತಿ ಸದಸ್ಯರಾಗಿರಲಿಲ್ಲ. ಸದರಿ ಮನೆ ಇರುವ ವಾರ್ಡು 4 ನೇ ವಾರ್ಡು ಎಂದು ನನಗೆ ಹೇಳಲು ಆಗುವುದಿಲ್ಲ. ನನಗೆ ಫ್ರಾಸಾ-1 ಆಗಲೀ, ಅಂಗಮ್ಮ ಎಂಬುವವರನ್ನು ಪರಿಚಯ ಇಲ್ಲ. ಅಲ್ಲಿ ಸದರಿ ವಾರ್ಡಿನಲ್ಲಿ ಫ್ರಾಸಾ-1 ಎಂಬುವವರು ಇದ್ದಾರೆ ಮತ್ತು ಅವರೇ ಅಜ್ಜಿಯೇ ಅಂಗಮ್ಮ ಎಂಬ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ದೃಢೀಕರಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ